5ನೇ ಕರ್ನಾಟಕ ಮಿನಿ ಒಲಿಂಪಿಕ್ಸ್ ಉದ್ಘಾಟಿಸಿದ ಸಿಎಂ ಡಿ.ಕೆ.ಶಿವಕುಮಾರ್

ಶಾಲಾ ಹಂತದಲ್ಲಿ ಕ್ರೀಡಾ ಚಟುವಟಿಕೆಗಳಿಗೆ ಪ್ರೋತ್ಸಾಹ

ಬೆಂಗಳೂರು, ನ.14: ಶಾಲಾ ಹಂತದಲ್ಲಿ ಕ್ರೀಡಾ ಚಟುವಟಿಕೆಗಳಿಗೆ ಹೆಚ್ಚಿನ ಪ್ರೋತ್ಸಾಹ ಒದಗಿಸಲು ನಮ್ಮ ಸರಕಾರ ಬದ್ಧ ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದ್ದಾರೆ.

ಶನಿವಾರ ಕಂಠೀರವ ಕ್ರೀಡಾಂಗಣದಲ್ಲಿ 5ನೇ ಕರ್ನಾಟಕ ಮಿನಿ ಒಲಂಪಿಕ್ಸ್ ಕ್ರೀಡಾಕೂಟವನ್ನು ಉದ್ಘಾಟಿಸಿ ಮಾತನಾಡಿದ ಅವರು, ಗ್ರಾಮಮಟ್ಟದಿಂದ ಒಲಿಂಪಿಕ್ಸ್ ವರೆಗೆ ಕ್ರೀಡಾ ಪ್ರತಿಭೆಗಳಿಗೆ ಪ್ರೋತ್ಸಾಹಿಸುವ ಕಾರ್ಯವನ್ನು ಸರಕಾರ ಮಾಡುತ್ತಿದೆ. ಮಕ್ಕಳಲ್ಲಿನ ಕ್ರೀಡಾ ಸಾಮರ್ಥ್ಯವನ್ನು ಗುರುತಿಸಿ ತರಬೇತಿ ನೀಡಲು ಪ್ರತಿ ಶಾಲೆಯಲ್ಲೂ ದೈಹಿಕ ಶಿಕ್ಷಣ ಶಿಕ್ಷಕರ ಅಗತ್ಯವಿದೆ ಎಂದರು.

ಈ ಹುದ್ದೆಗಳ ನೇಮಕಾತಿಗೆ ಮುಂದಿನ ದಿನಗಳಲ್ಲಿ ಈ ನಿಟ್ಟಿನಲ್ಲಿ ನಾವು ಗಮನ ಹರಿಸುತ್ತೇವೆ. ಪಿಯುಸಿ ಹಂತದಲ್ಲಿ ಕ್ರೀಡಾ



ಚಟುವಟಿಕೆಗಳಿಗೆ ಹೆಚ್ಚಿನ ಗಮನ ಹರಿಸುತ್ತಿಲ್ಲ ಎಂಬ ದೂರುಗಳಿದ್ದು, ಇದಕ್ಕೆ ಅವಕಾಶ ಇರಬಾರದು. ಶಾಲಾ ಮತ್ತು ಪಿಯು ಹಂತದಲ್ಲಿ ಕ್ರೀಡಾ ಚಟುವಟಿಕೆಗಳಿಗೆ ಪ್ರಾಶಸ್ತ್ಯ ನೀಡಬೇಕು ಎಂದು ಹೇಳಿದರು.

ನಾನು ಹೈಸ್ಕೂಲ್‌ನಲ್ಲಿದ್ದಾಗ ಸತತ ಮೂರು ವರ್ಷ ಕ್ರೀಡಾಕೂಟದಲ್ಲಿ ಚಾಂಪಿಯನ್ ಆಗಿ ಅಂದಿನ ರಾಜ್ಯಪಾಲರಿಂದ ಗೌರವ ಸ್ವೀಕರಿಸಿದ್ದೆ. ಪಿಯುಸಿಯಲ್ಲಿಯೂ ಕ್ರೀಡಾ ಚಟುವಟಿಕೆಗಳಲ್ಲಿ ಮುಂಚೂಣಿಯಲ್ಲಿದ್ದೆ. ವಿದ್ಯಾರ್ಥಿಗಳು ಕ್ರೀಡಾ ಚಟುವಟಿಕೆಗಳ ಜೊತೆಗೆ ವಿದ್ಯಾಭ್ಯಾಸದ ಕಡೆಗೂ ಗಮನ ಹರಿಸಬೇಕು ಎಂದು ಶಿವಕುಮಾರ್, ಕಿವಿಮಾತು ಹೇಳಿದರು.

ಕ್ರೀಡಾ ಮನೋಭಾವ ಇರಿಸಿಕೊಂಡವರು ಇತಿಹಾಸದಲ್ಲಿ ನಾಯಕರಾಗಿ ಬೆಳೆದಿದ್ದಾರೆ. ಆಟದಲ್ಲಿ ಗುರಿ ಮಾತ್ರ ಮುಖ್ಯ. ಈ ಬಾರಿ ಏಷ್ಯನ್ ಗೇಮ್ಸ್ ನಲ್ಲಿ ದೇಶಕ್ಕೆ 85 ಪದಕ ದೇಶಕ್ಕೆ ಬಂದಿದೆ. ಇದರಲ್ಲಿ ಬಹುತೇಕ ಮಂದಿ ಗ್ರಾಮೀಣ ಮಟ್ಟದಲ್ಲಿ ಬಂದವರು. ಮುಂದಿನ 10 ವರ್ಷ ನಿಮ್ಮ ಬದುಕಿನಲ್ಲಿ ಅತಿ ಮುಖ್ಯವಾದುದು. ಸಮರ್ಪಣಾ ಮನೋಭಾವದಿಂದ ಮುನ್ನಡೆಯಿರಿ ಎಂದು ಅವರು ಹೇಳಿದರು.

ಈ ವೇಳೆ ಸಚಿವ ಕೆ.ಎಂ.ಶಿವಲಿಂಗೇಗೌಡ, ವಿಧಾನ ಪರಿಷತ್ ಸದಸ್ಯರೂ ಆಗಿರುವ ಕೆಒಎ ಅಧ್ಯಕ್ಷ ಕೆ.ಗೋವಿಂದರಾಜು, ಚಿತ್ರನಟ ಹಾಜರಿದ್ದರು.

> ಯುವ ಪ್ರತಿಭೆಗಳನ್ನು ಹೊರತರುವ ಉದ್ದೇಶದಿಂದ ಭಾರತ ಜೋಡೊ ಯುವ ಸಂಘಗಳನ್ನು ಪ್ರಾರಂಭಿಸಿದ್ದೇವೆ. 16 ರಿಂದ 35 ವರ್ಷದ ಪ್ರತಿಭೆಗಳಿಗೆ ಇದು ಉತ್ತಮ ವೇದಿಕೆ. ಇದಕ್ಕಾಗಿ ಪ್ರತೀ ಪಂಚಾಯತ್ ಮತ್ತು ವಾರ್ಡ್‌ಗಳಿಗೆ ತಲಾ 10 ಲಕ್ಷ ರೂಪಾಯಿ ಒದಗಿಸಲಿದ್ದೇವೆ. ಇದನ್ನು ಸದುಪಯೋಗಪಡಿಸಿಕೊಳ್ಳಿ.
> **-ಡಿ.ಕೆ.ಶಿವಕುಮಾರ್,** ಸಿಎಂ

ನೆನಪಿರಲಿ ಪ್ರೇಮ್ ಸೇರಿದಂತೆ ಕ್ರೀಡಾ ಇಲಾಖೆ ಅಧಿಕಾರಿಗಳು, ಕ್ರೀಡಾಪಟುಗಳು

ರಾಮಣ್ಣ ಕೋಡಿಹೊಸಹಳ್ಳಿ-80 ಇಂದು ಅಭಿನಂದನಾ ಕಾರ್ಯಕ್ರಮ

ಬೆಂಗಳೂರು, ನ.14: ಕನ್ನಡ ಸಂಘರ್ಷ ಸಮಿತಿಯು ನ.15ರ ಬೆಳಗ್ಗೆ 10:30ಕ್ಕೆ ಇಲ್ಲಿನ ಚಾಮರಾಜಪೇಟೆಯಲ್ಲಿರುವ ಕನ್ನಡ ಸಾಹಿತ್ಯ ಪರಿಷತ್‌ನ ಶ್ರೀಕೃಷ್ಣರಾಜ ಪರಿಷನ್ಮಂದಿರದಲ್ಲಿ ಸಮಿತಿಯ 48ನೆ ಸಂಸ್ಥಾಪನಾ ದಿನಾಚರಣೆ ಹಾಗೂ ಕನ್ನಡಪರ ಹೋರಾಟಗಾರ ರಾಮಣ್ಣ ಕೋಡಿಹೊಸಹಳ್ಳಿ-80 ಅಭಿನಂದನಾ ಕಾರ್ಯಕ್ರಮ ಹಮ್ಮಿಕೊಂಡಿದೆ.

ರಾಮಣ್ಣ ಎಚ್. ಕೋಡಿಹೊಸಹಳ್ಳಿ ಅವರು ನ.15ಕ್ಕೆ 80 ವಸಂತಗಳನ್ನು ಪೂರೈಸುವ ಹಿನ್ನೆಲೆಯಲ್ಲಿ ಇದೇ ಕಾರ್ಯಕ್ರಮದಲ್ಲಿ ಅವರನ್ನು ಅಭಿನಂದಿಸಲಾಗುವುದು. ನಿಡುಮಾಮಿಡಿಮಠದ ಶ್ರೀ ವೀರಭದ್ರ ಚನ್ನಮಲ್ಲ ದೇಶಿಕೇಂದ್ರ ಸ್ವಾಮೀಜಿ ಸಾನಿಧ್ಯದಲ್ಲಿ ಕಾರ್ಯಕ್ರಮ ಜರುಗಲಿದೆ. ಹಿರಿಯ ಸಾಹಿತಿ ಹಂ.ಪ.ನಾಗರಾಜಯ್ಯ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ.

ಲೇಖಕಿ ಡಾ.ವಸುಂಧರಾ ಭೂಪತಿ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ, ಸ್ಮರಣ ಸಂಚಿಕೆ ಬಿಡುಗಡೆ ಮಾಡಲಿದ್ದಾರೆ. ನಿವೃತ್ತ ಅಧಿಕಾರಿ ಎನ್.ಆರ್.ವಿಶುಕುಮಾರ್ ಅಭಿನಂದನಾ ಗ್ರಂಥ ಬಿಡುಗಡೆ ಮಾಡಲಿದ್ದು, ಕನ್ನಡಪರ ಚಿಂತಕ ಕೆ.ರಾಜಕುಮಾರ್ ಅಭಿನಂದನಾ ನುಡಿಯನ್ನಾಡಲಿದ್ದಾರೆ. ಸಮಿತಿಯ ಅಧ್ಯಕ್ಷ ಎ.ಎಸ್.ನಾಗರಾಜಸ್ವಾಮಿ ಆಶಯ ಭಾಷಣ ಮಾಡಲಿದ್ದಾರೆ ಎಂದು ಪ್ರಕಟನೆ ತಿಳಿಸಿದೆ.

ನ.23ರಿಂದ 26ರವರೆಗೆ ‘ಮಕ್ಕಳ ವಚನ ಮೇಳ’

ಬೆಂಗಳೂರು, ನ.14: ಮಕ್ಕಳಲ್ಲಿ ವಚನಗಳನ್ನು ಬಿತ್ತುವ ಸದುದ್ದೇಶದಿಂದ ವಚನಜ್ಯೋತಿ ಬಳಗವು ಪ್ರತಿವರ್ಷದಂತೆ ಈ ವರ್ಷವೂ ಮಕ್ಕಳ ವಚನ ಮೇಳವನ್ನು ನಾಗರಭಾವಿ ಸಮೀಪದ ಕಲಾಗ್ರಾಮದಲ್ಲಿ ನ.23 ರಿಂದ 26ರವರೆಗೆ ಆಯೋಜಿಸಲಾಗಿದೆ ಎಂದು ವಚನಜ್ಯೋತಿ ಬಳಗದ ಅಧ್ಯಕ್ಷ ಪಿನಾಕಪಾಣಿ ತಿಳಿಸಿದ್ದಾರೆ.

ಶನಿವಾರ ಪತ್ರಿಕಾ ಹೇಳಿಕೆ ನೀಡಿರುವ ಅವರು, ಶಿಶುವಿಹಾರ ಮಾಂಟೆಸರಿಯಿಂದ ಹತ್ತನೇ ತರಗತಿಯವರೆಗಿನ ವಿದ್ಯಾರ್ಥಿಗಳು ಮಕ್ಕಳ ವಚನ ಮೇಳದಲ್ಲಿ ಪಾಲ್ಗೊಳ್ಳಬಹುದಾಗಿದ್ದು, ವಚನ ವಚನ ಸ್ಪರ್ಧೆಗಳಲ್ಲಿ 12 ಪ್ರಕಾರಗಳನ್ನು ಗುರುತಿಸಲಾಗಿದೆ. ವಚನ ಗಾಯನ, ವಚನ ಪ್ರಬಂಧ, ವಚನ ವಿವೇಚನ, ವಚನ ಚಿತ್ರ, ವಚನ ನೃತ್ಯ, ವಚನ ಅಂತ್ಯಾಕ್ಷರಿ, ವಚನ ರಸಪ್ರಶ್ನೆ, ವಚನ ರೂಪಕ, ವಚನ ವೇಷಭೂಷಣ, ವಚನ ಕಥೆ, ವಚನ ಕಂಠಪಾಠ ಮತ್ತು ಸಮೂಹ ವಚನ ಗಾಯನ ಸ್ಪರ್ಧೆಗಳು ನಡೆಯಲಿವೆ ಎಂದಿದ್ದಾರೆ.

ಆಸಕ್ತ ವಿದ್ಯಾರ್ಥಿಗಳು ತಮ್ಮ ಶಾಲೆಗಳ ಮೂಲಕ ಅಥವಾ ವೈಯಕ್ತಿಕವಾಗಿ ನ.20ರೊಳಗೆ ನೊಂದಾಯಿಸಿ ಕೊಳ್ಳಬೇಕು. ಪಾಲ್ಗೊಂಡ ಎಲ್ಲ ವಿದ್ಯಾರ್ಥಿಗಳಿಗೂ ಪ್ರಶಂಸಾಪತ್ರ ನೀಡಲಾಗುವುದು. ಬಹುಮಾನಿತರಿಗೆ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ. ಹೆಚ್ಚಿನ ವಿವರಗಳಿಗಾಗಿ ಮೊ.ಸಂಖ್ಯೆ 98451 84267ನ್ನು ಸಂಪರ್ಕಿಸಬಹುದು ಎಂದು ಪಿನಾಕಪಾಣಿ ತಿಳಿಸಿದ್ದಾರೆ.

ಗಿನ್ನೆಸ್ ದಾಖಲೆ ನಿರ್ಮಿಸಿದ ಮಾಂಡ್ ಸೊಭಾಣ್ ನೇತೃತ್ವದ ಸಮೂಹ ಗಾಯನ

ಮಂಗಳೂರು, ನ.14: ಮಾಂಡ್ ಸೊಭಾಣ್ ನೇತೃತ್ವದಲ್ಲಿ ನಗರದ ಪುರಭವನದಲ್ಲಿ ಕಳೆದೊಂದು ವಾರದಿಂದ ನಡೆಯುತ್ತಿರುವ ಸಮೂಹ ಗಾಯನ ಕಾರ್ಯಕ್ರಮವು ಗಿನ್ನೆಸ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ ತನ್ನದಾಗಿಸಿಕೊಂಡಿದೆ.

ಅತೀ ದೀರ್ಘಾವಧಿಯ ಈ ಸಮೂಹ ಗಾಯನವು ಶನಿವಾರ ಹನ್ನೊಂದು ದಿನ, ಹನ್ನೊಂದು ಗಂಟೆ, ಹಾಗೂ ಹನ್ನೊಂದು ನಿಮಿಷಗಳನ್ನು ಪೂರ್ಣಗೊಳಿಸುವುದರೊಂದಿಗೆ ಗಿನ್ನೆಸ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ ದಾಖಲೆ ಪುಟದಲ್ಲಿ ಸೇರಿದೆ.

ಶನಿವಾರ ಸಂಜೆ 5:12 ಗಂಟೆಯಾಗುತ್ತಿದ್ದಂತೆಯೇ ಮಾಂಡ್ ಸೊಭಾಣ್ ಅಧ್ಯಕ್ಷ ಲುವಿ ಜೆ. ಪಿಂಟೊ ಹಾಗೂ ಇತರ ಸಂಘಟಕರು ಹರ್ಷೋದ್ಗಾರದೊಂದಿಗೆ ವಿಶ್ವ ದಾಖಲೆಯನ್ನು ಸಂಭ್ರಮಿಸಿದರು. ಈ ಹಿಂದೆ 2024ರಲ್ಲಿ ವಡ್ತಾಲ್‌ನಲ್ಲಿ ಹರಿಕೃಷ್ಣ ಕೀರ್ತನ್ ಯಾಗ್ ಸಂಸ್ಥೆಯು ನಿರ್ಮಿಸಿದ್ದ 11 ದಿನಗಳು, 11 ಗಂಟೆಗಳು, 11 ನಿಮಿಷಗಳ (275 ಗಂಟೆಗಳು ಮತ್ತು 11 ನಿಮಿಷಗಳು) ಮೈಲಿಗಲ್ಲನ್ನು ಮಾಂಡ್ ಸೊಭಾಣ್ ಸಂಗೀತ ಮ್ಯಾರಥಾನ್ ಮೀರಿಸಿದೆ.

ಮಾಂಡ್ ಸೊಭಾಣ್ ಸಂಸ್ಥೆಯ 40ನೇ ವಾರ್ಷಿಕೋತ್ಸವದ ನೆನಪಿಗಾಗಿ ಮತ್ತು ಸಂಸ್ಥಾಪಕ ದಿವಂಗತ ಎರಿಕ್ ಒಝೇರಿಯೊ ಸ್ಮರಣಾರ್ಥವಾಗಿ ಹಮ್ಮಿಕೊಳ್ಳಲಾದ ಮಹಾಸಂಗೀತ ಸಮ್ಮೇಳನದ ಪ್ರಮುಖ ಭಾಗವಾಗಿ ಈ ಐತಿಹಾಸಿಕ ದಾಖಲೆಯ ಪ್ರಯತ್ನ ನಡೆದಿತ್ತು.

ಈ ಸಾಧನೆಯ ಮೂಲಕ ಮಾಂಡ್ ಸೊಭಾಣ್ ಮತ್ತೊಮ್ಮೆ ಕೊಂಕಣಿ ಭಾಷೆ ಮತ್ತು ಸಂಸ್ಕೃತಿಗೆ ಜಾಗತಿಕ ಮನ್ನಣೆ ತಂದುಕೊಟ್ಟಿದೆ. ಮುಖ್ಯವಾಗಿ ಕರಾವಳಿ ಕರ್ನಾಟಕ, ಗೋವಾ, ಮಹಾರಾಷ್ಟ್ರ, ಕೇರಳದ ಕೆಲವು



> ಒಂದು ಸಂಸ್ಥೆಯಾಗಿ ವಿಶ್ವದಾಖಲೆಯನ್ನು ಹೊಂದಲು ನಮಗೆ ಹೆಮ್ಮೆಯಿದೆ. ಗಾಯಕರು ಮತ್ತು ಈ ಬೃಹತ್ ಯೋಜನೆಗಾಗಿ ತೆರೆಮರೆಯಲ್ಲಿ ಶ್ರಮಿಸಿದ ಪ್ರತಿಯೊಬ್ಬರೂ ಈ ದಾಖಲೆಯ ನಿಜವಾದ ಒಡೆಯರು. ವಿಶ್ವದ ಮೂಲೆ ಮೂಲೆಗಳಿಂದ ನಮಗೆ ಬೆಂಬಲ ನೀಡಿದ ಸಮಗ್ರ ಕೊಂಕಣಿ ಸಮುದಾಯಕ್ಕೆ ನಾನು ಕೃತಜ್ಞತೆ ಸಲ್ಲಿಸುತ್ತೇನೆ. ದಾಖಲೆ ನಿರ್ಮಿಸುವುದು ಮಾತ್ರ ನಮ್ಮ ಏಕೈಕ ಉದ್ದೇಶವಾಗಿರಲಿಲ್ಲ. ಈ ಪ್ರಯತ್ನದ ಮೂಲಕ ನಾವು ಕೊಂಕಣಿ ಸಮುದಾಯದ ಐಕ್ಯ ಮತ್ತು ಶಕ್ತಿಯನ್ನು ಯಶಸ್ವಿಯಾಗಿ ಪ್ರದರ್ಶಿಸಿದ್ದೇವೆ.
> **- ಲುವಿ ಜೆ. ಪಿಂಟೊ ಅಧ್ಯಕ್ಷರು,** ಮಾಂಡ್ ಸೊಭಾಣ್

ಭಾಗಗಳಲ್ಲಿ ನೆಲೆಸಿರುವ ಕೊಂಕಣಿ ಸಮುದಾಯವು ಹೊಸ ವಿಶ್ವದಾಖಲೆಯನ್ನು ಸ್ಥಾಪಿಸುವ ಮೂಲಕ ತನ್ನಲ್ಲಿನ ಒಗ್ಗಟ್ಟು, ಶಿಸ್ತು ಹಾಗೂ ಭಾಷಾ ಪ್ರೇಮಕ್ಕೆ ಸಾಕ್ಷಿಯಾಯಿತು.

ಸಂಗೀತ ಮ್ಯಾರಥಾನ್‌ಗೆ ಮಾಂಡ್ ಸೊಭಾಣ್ ಅಧ್ಯಕ್ಷ ಲುವಿ ಜೆ. ಪಿಂಟೊ ನೇತೃತ್ವದಲ್ಲಿ ತಿಂಗಳುಗಳ ನಿಖರ ಸಿದ್ಧತೆ ನಡೆದಿತ್ತು. ದಾಖಲೆಯ ನಂತರವೂ ಗಾಯನ ಮುಂದುವರಿದಿದ್ದು, ರವಿವಾರ ಸಂಜೆ 5 ಗಂಟೆಗೆ 'ಟೀಮ್ ಸುಮೇಲ್' ತಂಡದ ಹಾಡುಗಾರಿಕೆಯೊಂದಿಗೆ ಪ್ರಥಮ ವಿಶ್ವ ಕೊಂಕಣಿ ಸಂಗೀತ ಮಹಾಮೇಳಕ್ಕೆ ಅಧಿಕೃತ ತೆರೆ ಬೀಳಲಿದೆ.

ಕೊಂಕಣಿ ಸಂಗೀತ ವಿಶ್ವ ಭೂಪಟದಲ್ಲಿ ಗುರುತಿಸುವಂತೆ ಮಾಡಿದ ದಾಖಲೆ ಡಾ.ರೊನಾಲ್ಡ್ ಕೊಲಾಸೊ



'ಮ್ಯಾರಥಾನ್ ಗಾಯನ (ಬಹು ಗಾಯಕರು)' ವಿಭಾಗದಲ್ಲಿ ಹೊಸ ಗಿನ್ನೆಸ್ ವಿಶ್ವ ದಾಖಲೆ ನಿರ್ಮಿಸಿದ ಮ್ಯಾಂಡ್ ಸೊಭಾಣ್ ಸಂಸ್ಥೆಯ ಐತಿಹಾಸಿಕ ಸಾಧನೆಯನ್ನು ನಗರದಲ್ಲಿ ಅದ್ದೂರಿಯಾಗಿ ಕೇಕ್ ಕತ್ತರಿಸುವ ಮೂಲಕ ಸಂಭ್ರಮಿಸಲಾಯಿತು. ಈ ಸಂಭ್ರಮಾಚರಣೆಯಲ್ಲಿ ಅನಿವಾಸಿ ಭಾರತೀಯ ಉದ್ಯಮಿ, ಸಮಾಜಸೇವಕ ಡಾ.ರೊನಾಲ್ಡ್ ಕೊಲಾಸೊ ಪಾಲ್ಗೊಂಡರು.

ಡಾ.ರೊನಾಲ್ಡ್ ಕೊಲಾಸೊ ಮತ್ತವರ ಪತ್ನಿ ಜೀನ್ ಕೊಲಾಸೊ ಅವರೊಂದಿಗೆ ವಿಧಾನ ಪರಿಷತ್ ಸದಸ್ಯ ಐವನ್ ಡಿಸೋಜ, ಕೊಂಕಣಿ ಸಾಹಿತ್ಯ ಅಕಾಡಮಿ ಅಧ್ಯಕ್ಷ ಸ್ಟಾನಿ ಅಲ್ವಾರಿಸ್, ಮಾಜಿ ಅಧ್ಯಕ್ಷ ರಾಯ್ ಕ್ಯಾಸ್ಟಲಿನೊ ಸಹಿತ ಕೊಂಕಣಿ ಸಂಸ್ಕೃತಿಯ ಗಣ್ಯರು ಮತ್ತು ಪೋಷಕರು ಈ ಸಂಭ್ರಮದ ಕಾರ್ಯಕ್ರಮಕ್ಕೆ ಸಾಕ್ಷಿಯಾದರು.

ಸಂಸ್ಥೆಯ ಸಾಧನೆಯನ್ನು ಶ್ಲಾಘಿಸಿ ಮಾತನಾಡಿದ ಡಾ.ರೊನಾಲ್ಡ್ ಕೊಲಾಸೊ, ತನ್ನ ದಿಟ್ಟ ಉಪಕ್ರಮಗಳು ಮತ್ತು ಅಚ್ಚುಕಟ್ಟಾದ ಕಾರ್ಯವೈಖರಿಗೆ ಹೆಸರಾಗಿರುವ ಮಾಂಡ್ ಸೊಭಾಣ್ ಈ ಜಾಗತಿಕ ಮೈಲಿಗಲ್ಲಿನ ಮೂಲಕ ತನ್ನ ಕಿರೀಟಕ್ಕೆ ಮತ್ತೊಂದು ಗರಿಯನ್ನು ಸೇರಿಸಿಕೊಂಡಿದೆ. ದಾಖಲೆ ನಿರ್ಮಿಸಿದ ಈ ಸಂಗೀತ ಮ್ಯಾರಥಾನ್ ಜಗತ್ತಿನಾದ್ಯಂತ ಸುಮಾರು 7,000 ಗಾಯಕರನ್ನು ಒಗ್ಗೂಡಿಸಿದೆ. 5,000ಕ್ಕೂ ಹೆಚ್ಚು ಹಾಡುಗಳ ಸುಧೆಯನ್ನು ಹರಿಸಿದೆ. ಕೊಂಕಣಿ ಸಂಗೀತವನ್ನು ವಿಶ್ವ ಭೂಪಟದಲ್ಲಿ ಗುರುತಿಸುವಂತೆ ಮಾಡಿದ ಅಧ್ಯಕ್ಷ ಲುವಿ ಜೆ. ಪಿಂಟೊ ಮತ್ತು ಮಾಂಡ್ ಸೊಭಾಣ್ ತಂಡದ ಅಚಲ ಸಮರ್ಪಣೆ, ದೂರದೃಷ್ಟಿಯ ಯೋಜನೆ ಮತ್ತು ಐತಿಹಾಸಿಕ ವಿಜಯಕ್ಕಾಗಿ ಅಭಿನಂದನೆ ಸಲ್ಲಿಸುತ್ತೇನೆ ಎಂದರು.

ವಿನ್ಸೆಂಟ್ ಫೆರ್ನಾಂಡಿಸ್ ಕಾಸಿಯಾ ಮತ್ತವರ 'ಮೊಗಾಚಿ ಲಹರಾಂ' ತಂಡದವರು ಸಂಭ್ರಮಾಚರಣೆಯುದ್ದಕ್ಕೂ ಉತ್ಸಾಹಭರಿತ ಬ್ರಾಸ್ ಬ್ಯಾಂಡ್ ಸಂಗೀತವನ್ನು ನುಡಿಸುವ ಮೂಲಕ ಕಾರ್ಯಕ್ರಮಕ್ಕೆ ಮತ್ತಷ್ಟು ಮೆರುಗು ನೀಡಿದರು.

ಮಂಗಳೂರು-ಬೆಂಗಳೂರು ವಂದೇ ಭಾರತ್ ವೇಗ ಹೆಚ್ಚಳ, ಶುಲ್ಕ ಪರಿಷ್ಕರಣೆಗೆ ಆಗ್ರಹ

ಮಂಗಳೂರು, ನ.14: ಕರ್ನಾಟಕದ ರಾಜಧಾನಿ ಬೆಂಗಳೂರು, ಕರಾವಳಿ ಕರ್ನಾಟಕ ಹಾಗೂ ಗೋವಾ ರಾಜ್ಯಗಳ ನಡುವಿನ ರೈಲ್ವೆ ಸಂಪರ್ಕವನ್ನು ಬಲಪಡಿಸುವ ನಿಟ್ಟಿನಲ್ಲಿ ಬೆಂಗಳೂರು- ಮಂಗಳೂರು-ಮಡಗಾಂವ್ ವಂದೇ ಭಾರತ್ ರೈಲು ಸಂಚಾರಕ್ಕೆ ಚಾಲನೆಯು ಕರಾವಳಿ ಜನರ ಬಹುದಿನಗಳ ಬೇಡಿಕೆಯನ್ನು ಈಡೇರಿಸಿದೆ. ಕರಾವಳಿಯ ರೈಲು ಪ್ರಯಾಣಿಕರು ಸೇರಿದಂತೆ ಸಾರ್ವಜನಿಕರು ಹೊಸ ರೈಲನ್ನು ಸಂಭ್ರಮದಿಂದ ಸ್ವಾಗತಿಸಿದ್ದಾರೆ. ಈ ಸಂಭ್ರಮದ ನಡುವೆಯೂ ರೈಲಿನ ಪ್ರಯಾಣ ದರ, ಸರಾಸರಿ ವೇಗ, ಪ್ರಯಾಣದ ಅವಧಿ ಮತ್ತು ಆಹಾರ ಶುಲ್ಕದ ವಿಚಾರ ಸಾರ್ವಜನಿಕ ವಲಯದಲ್ಲಿ ಚರ್ಚೆಗೆ ಕಾರಣವಾಗಿದೆ.

ಗಂಟೆಗೆ 52 ಕಿ.ಮೀ.ಗಿಂತ ಕಡಿಮೆ ಸರಾಸರಿ ವೇಗ ಹೊಂದಿರುವ ಈ ವಂದೇ ಭಾರತ್ ರೈಲಿಗೂ ಸೂಪರ್‌ಫಾಸ್ಟ್ ರೈಲಿನ ವರ್ಗೀಕರಣದಡಿ ಹೆಚ್ಚುವರಿ ಶುಲ್ಕ ವಿಧಿಸಲಾಗುತ್ತಿದೆ ಎಂಬುದು ಪ್ರಯಾಣಿಕರ ಆಕ್ಷೇಪವಾಗಿದೆ.

ಯಶವಂತಪುರ-ಮಡಗಾಂವ್ ವಂದೇ ಭಾರತ್ ರೈಲಿನ ಪ್ರಯಾಣ ದರವು ಬಹುತೇಕ ಸಮಾನ ದೂರದ ಮಂಗಳೂರು ಸೆಂಟ್ರಲ್-ತಿರುವನಂತಪುರ ಸೆಂಟ್ರಲ್ ವಂದೇ ಭಾರತ್ ರೈಲಿನ ದರಕ್ಕಿಂತ ಹೆಚ್ಚಾಗಿದೆ. ಸುಮಾರು 620 ಕಿ.ಮೀ. ದೂರದ ಮಂಗಳೂರು- ತಿರುವನಂತಪುರ ಪ್ರಯಾಣಕ್ಕೆ ಚೇರ್ ಕಾರ್ (ಸಿಸಿ) ದರ 1,640 ರೂ.ಗಳಿದ್ದರೆ, ಯಶವಂತಪುರ-ಕಾರವಾರ ಪ್ರಯಾಣಕ್ಕೆ 2,120 ರೂ.ವಿಧಿಸಲಾಗುತ್ತಿದೆ. ಅದೇ ರೀತಿ, ಎಕ್ಸಿಕ್ಯೂಟಿವ್ ಚೇರ್ ಕಾರ್ (ಇಸಿ) ವಿಭಾಗದಲ್ಲಿ ಮಂಗಳೂರು-ತಿರುವನಂತಪುರ ಪ್ರಯಾಣಕ್ಕೆ 2,970 ರೂ.ಗಳಾಗಿದ್ದರೆ, ಯಶವಂತಪುರ-ಕಾರವಾರ ಪ್ರಯಾಣಕ್ಕೆ 3,720 ರೂ. ಪಾವತಿಸಬೇಕಾಗಿದೆ. ಯಶವಂತಪುರ-ಕಾರವಾರ ನಡುವಿನ ವಾಸ್ತವಿಕ ದೂರ ಸುಮಾರು 610 ಕಿ.ಮೀ. ಆಗಿದ್ದರೂ, ದರ ಲೆಕ್ಕಾಚಾರದಲ್ಲಿ 760 ಕಿ.ಮೀ. ಎಂದು ಪರಿಗಣಿಸಲಾಗುತ್ತಿದೆ. ಕೊಂಕಣ ರೈಲ್ವೆ ಜಾಲದಲ್ಲಿ ಕ್ರಮಿಸುವ ದೂರಕ್ಕೆ ಶೇ.40ರಷ್ಟು ಹಾಗೂ ನೈಋತ್ಯ ರೈಲ್ವೆಯ ಸಕಲೇಶಪುರ ಸುಬ್ರಹ್ಮಣ್ಯ ರೋಡ್ ಘಾಟ್ ವಿಭಾಗದಲ್ಲಿ ಶೇ.100ರಷ್ಟು ಹೆಚ್ಚುವರಿ ದೂರದ ಲೆಕ್ಕಾಚಾರ ಅನ್ವಯವಾಗುತ್ತಿದೆ ಎಂಬುದು ಪ್ರಯಾಣಿಕರ ಆಕ್ಷೇಪವಾಗಿದೆ.

ತೋಕೂರು-ಮಡಗಾಂವ್ ನಡುವಿನ ಕೊಂಕಣ ರೈಲ್ವೆ ಮಾರ್ಗದಲ್ಲಿ ಸುಮಾರು 120 ಕಿ.ಮೀ. ಹೆಚ್ಚುವರಿ ದೂರ ದರ ಲೆಕ್ಕಕ್ಕೆ ಸೇರುತ್ತದೆ. ಇದರಿಂದ ಮಂಗಳೂರು ಜಂಕ್ಷನ್- ಮಡಗಾಂವ್ ನಡುವಿನ ವಾಸ್ತವಿಕ 303 ಕಿ.ಮೀ. ದೂರವನ್ನು ಸುಮಾರು 423 ಕಿ.ಮೀ. ಎಂದು ಪರಿಗಣಿಸಲಾಗುತ್ತಿದೆ.

ಅದೇ ರೀತಿ, ಯಶವಂತಪುರ ಮಂಗಳೂರು ಜಂಕ್ಷನ್ ನಡುವಿನ ವಾಸ್ತವಿಕ 357 ಕಿ.ಮೀ. ದೂರವನ್ನು ದರ ಲೆಕ್ಕಾಚಾರದಲ್ಲಿ ಸುಮಾರು 412 ಕಿ.ಮೀ. ಎಂದು ಪರಿಗಣಿಸಲಾಗುತ್ತಿದೆ ಎನ್ನಲಾಗಿದೆ.

ಯಶವಂತಪುರದಿಂದ ಮಡಗಾಂವ್‌ಗೆ ತಲುಪಲು 13 ಗಂಟೆ 20 ನಿಮಿಷಗಳು ಬೇಕಾಗುತ್ತದೆ. ಯಶವಂತಪುರದಿಂದ ಕಾರವಾರಕ್ಕೆ ಸುಮಾರು 12 ಗಂಟೆಗಳ ಪ್ರಯಾಣದ ಅವಧಿಯಿದೆ. ಹಿಂದಿರುಗುವಾಗ ಮಡಗಾಂವ್‌ನಿಂದ ಯಶವಂತಪುರಕ್ಕೆ 12 ಗಂಟೆ 55 ನಿಮಿಷಗಳು ಹಾಗೂ ಕಾರವಾರದಿಂದ ಯಶವಂತಪುರಕ್ಕೆ 12 ಗಂಟೆ 10 ನಿಮಿಷಗಳು ಬೇಕಾಗುತ್ತದೆ. ದೀರ್ಘ ಪ್ರಯಾಣದ ಕಾರಣ ಎರಡು ಬಾರಿ ಊಟ ಮತ್ತು ಒಂದು ಬಾರಿ ಉಪಾಹಾರ ಒದಗಿಸಲಾಗುತ್ತದೆ. ಇದರಿಂದ ಆಹಾರ ಸೇವಾ ಶುಲ್ಕವೂ ಹೆಚ್ಚಾಗುತ್ತದೆ ಎಂಬ ಆಕ್ಷೇಪ ಸಾರ್ವಜನಿಕ ವಲಯದಲ್ಲಿದೆ.



> ಕರಾವಳಿಯ ನಿರೀಕ್ಷೆಯ ವಂದೇ